AA

# 2011

# ಕನ್ನಡ

# (ಕಡ್ಡಾಯ)

ಸಮಯ : 3 ಗಂಟೆ ]  [ಗರಿಷ್ಠ ಅಂಕಗಳು : 150

## ಸೂಚನೆಗಳು

(1) ಅಭ್ಯರ್ಥಿಗಳು ಎಲ್ಲಾ ಭಾಗಗಳನ್ನು ಮತ್ತು ಪ್ರಶ್ನೆಗಳನ್ನು ಉತ್ತರಿಸಬೇಕು.

(2) ಪ್ರತಿ ಪ್ರಶ್ನೆಗೆ ನಮೂದಿಸಲಾದ ಅಂಕಗಳನ್ನು ಪ್ರಶ್ನೆಯ ಕೊನೆಯಲ್ಲಿ ನೀಡಲಾಗಿದೆ.

(3) ನಿರ್ದಿಷ್ಟವಾಗಿ ಸೂಚಿಸದ ಹೊರತು, ಉತ್ತರಗಳನ್ನು ಕನ್ನಡದಲ್ಲಿ ಬರೆಯತಕ್ಕದ್ದು.

(4) ಭಾಗ ಎ ಪ್ರಶ್ನೆ ಸಂಖ್ಯೆ 3 ಕ್ಕೆ ಸಂಬಂಧಿಸಿದಂತೆ ಪ್ರೆಸಿ ಗದ್ಯಭಾಗವು ಸೂಚನೆಗಿಂತ ಬಹಳ ಹೆಚ್ಚು ಅಥವಾ ಕಡಮೆಯಾದಲ್ಲಿ ಅಂಕಗಳನ್ನು ಕಳೆಯಲಾಗುವುದು.

(5) ಭಾಗ ಎ ಪ್ರಶ್ನೆ ಸಂಖ್ಯೆ 3 ನ್ನು ನೀಡಲಾದ ಪ್ರೆಸಿ ಹಾಳೆಯಲ್ಲಿಯೇ ಉತ್ತರಿಸತಕ್ಕದ್ದು.

(6) ಪತ್ರವನ್ನು ಬರೆಯುವ ಪ್ರಶ್ನೆಗಳನ್ನು ಉತ್ತರಿಸುವಾಗ ನಿಮ್ಮ ಸಹಿಯನ್ನು ಹಾಕುವುದನ್ನಾಗಲೀ ಅಥವಾ ನಿಮ್ಮ ಹೆಸರು/ವ್ಯಕ್ತಿತ್ವವನ್ನು ನಮೂದಿಸುವುದನ್ನಾಗಲಿ ಮಾಡಕೂಡದು.

SEAL

www.shikarat.com

**Note :** The English version of the instructions is printed on the back cover of this question paper.

[Turn over

## ಭಾಗ ಎ

1. ಈ ಕೆಳಗಿನ ಯಾವುದಾದರೂ **ಒಂದರ** ಬಗ್ಗೆ ಸುಮಾರು 300 ಶಬ್ದಗಳಲ್ಲಿ ಒಂದು ಪ್ರಬಂಧ ಬರೆಯಿರಿ : 25

   (ಅ) ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರವಾಸದ ಅಗತ್ಯ

   (ಆ) ಅರಣ್ಯಗಳನಾಶ – ದೇಶವಿನಾಶ

   (ಇ) ಗ್ರಾಮಾಂತರ ಪ್ರಾಥಮಿಕ ಶಾಲೆಗಳ ಹೀನಸ್ಥಿತಿ

   (ಈ) ಹಳೆಯ ಸಂಸ್ಕೃತಿಯ ಅಳಿವು-ಉಳಿವು

2. ಈ ಕೆಳಗಿನ ಗದ್ಯಭಾಗವನ್ನು ಗಮನವಿಟ್ಟು ಓದಿ ಕೊನೆಯಲ್ಲಿರುವ ಪ್ರಶ್ನೆಗಳಿಗೆ ನಿಮ್ಮ ಮಾತುಗಳಲ್ಲಿ ಉತ್ತರಿಸಿ : 25

ಸಂಸ್ಕೃತಾನುಕರಣವೆಂದರೆ, ವಂಶಪಾರಂಪರ್ಯವಾಗಿ ಭಕ್ತಿಭಾವದಿಂದ ಕಾಣುತ್ತಾ ಬಂದ ಕುಲದೇವತೆ ಅಥವಾ ಮನೆ ದೇವತೆಗಳನ್ನು ಪರಿತ್ಯಜಿಸಿ ಆರ್ಯರ ದೇವತೆಗಳಾದ ಶಿವ, ವಿಷ್ಣು, ಬ್ರಹ್ಮರನ್ನು ಸ್ವೀಕರಿಸುವುದು; ಅಥವಾ ತಮ್ಮ 'ಕ್ಷುದ್ರ' ದೇವತೆಯಾದ 'ಮಾರಿ'ಯನ್ನು ಉನ್ನತ ಸ್ಥಾನಕ್ಕೇರಿಸಿ 'ದುರ್ಗಾದೇವತೆ'ಯನ್ನಾಗಿ ಮಾಡುವುದು; ಎಂದೋ ಒಮ್ಮೆ ಮಾತ್ರವಲ್ಲದೆ ದಿನವೂ ಸ್ನಾನ ಪೂಜೆಗಳನ್ನು ಮಾಡುವುದು; ಮಾಂಸ ಮದ್ಯ ಸೇವನೆಯನ್ನು ತ್ಯಜಿಸಿ, ಸಾತ್ವಿಕ ಆಹಾರವನ್ನು ಸೇವಿಸುವುದು; ತಮ್ಮ ಮಾತುಕತೆಗಳಲ್ಲಿ ಹೆಚ್ಚು ಹೆಚ್ಚಾಗಿ ಸಂಸ್ಕೃತ ಭಾಷೆಯ ಶಬ್ದಗಳನ್ನು ಬಳಸುವುದು; ಓದುಬರಹದಲ್ಲಿ ಆಸಕ್ತಿಯನ್ನು ತಳೆಯುವುದು; ಪರಂಪರೆಯ ಉದ್ಯೋಗ ದಂಧೆಗಳನ್ನು ಕ್ರಮೇಣ ಬಿಡತ್ತಾ ಉಚ್ಚಜಾತಿಯವರ ಉದ್ಯೋಗಗಳನ್ನು ಮಾಡತೊಡಗುವುದು. ಹೀಗೆಯೇ ಬದಲಾವಣೆಯ ಪ್ರಕ್ರಿಯೆ ಸಾಗುತ್ತದೆ. ಇಂಥ ಪ್ರಕ್ರಿಯೆಗೆ ಸಾಮಾನ್ಯವಾಗಿ ಒಳಗಾಗುವವರು ಕೆಳಜಾತಿಯವರು ಮತ್ತು ಗಿರಿಜನರು ಅಥವಾ ಆದಿವಾಸಿಗಳು. ಇಂಥ ಸ್ಥಿತ್ಯಂತರದಿಂದ ಅವರ ಸ್ಥಾನಮಾನಕ್ಕೊಂದು ಬೆಲೆ ಬರುತ್ತದೆ.

ಆದರೆ ಬ್ರಿಟಿಶರು ಈ ದೇಶಕ್ಕೆ ಬಂದು ರಾಜ್ಯಾಡಳಿತೆಯನ್ನು ನಡೆಸ ತೊಡಗಿದಂದಿನಿಂದ ಸಂಸ್ಕೃತಾನುಕರಣಕ್ಕೆ ಹೆಚ್ಚಿನ ನೆರವು ದೊರಕಿತು. ಯಾಕೆಂದರೆ, ಬ್ರಿಟಿಶರು ಕ್ರಾಂತಿಕಾರಕ ಪರಿಸ್ಥಿತಿಯನ್ನು ನಿರ್ಮಿಸಿದರು. ಅವರು ನವೀನ ರಾಜ್ಯ ಪದ್ಧತಿಯನ್ನು ಜಾರಿಗೆ ತಂದರು; ಪಾರ್ಲಿಮೆಂಟರಿ ಪ್ರಜಾಪ್ರಭುತ್ವವನ್ನು ಪ್ರತಿಷ್ಠಾಪಿಸಿದರು; ಇಂಗ್ಲಿಷ್ ಭಾಷೆಯನ್ನೂ, ಹೊಸ ರೀತಿಯ ಶಿಕ್ಷಣ ಪದ್ಧತಿಯನ್ನೂ ಪ್ರಚಾರಗೊಳಿಸಿದರು; ನವೀನ ನ್ಯಾಯ ಪದ್ಧತಿಯನ್ನು ಅನುಷ್ಠಾನಗೊಳಿಸಿದರು; ಅನೇಕ ಕ್ರಾಂತಿಕಾರಕ ಕಾನೂನುಗಳನ್ನು ಜಾರಿಗೊಳಿಸಿದರು. ಇವೆಲ್ಲದರಿಂದ ಪರಂಪರೆಯ ಬಂಡೆಗಲ್ಲಿನಲ್ಲಿ ಬಿರುಕು ಬಿಟ್ಟಿತು. ಜನರು ಹೊಸ ಗಾಳಿಯನ್ನು ಸೇವಿಸತೊಡಗಿದರು. ಬ್ರಿಟಿಶರ ರಾಜ್ಯಾಡಳಿತೆಗೆ ಸಮಸಮವಾಗಿ ಪೂರಕ ರೀತಿಯಲ್ಲಿ, ಔದ್ಯೋಗೀಕರಣ ಹಾಗೂ ಕ್ರೈಸ್ತೀಕರಣ

www.sikkarat.com

ಪ್ರಬಲವಾದುವು. ಇದರಿಂದ ಭಾರತೀಯರ ಆರ್ಥಿಕ ಮತ್ತು ಧಾರ್ಮಿಕ ವಲಯಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳಾದುವು. ಈ ಬದಲಾವಣೆಗಳಿಂದ ವ್ಯಕ್ತಿಯು ತನ್ನ ಪರಂಪರೆಯ ಕಟ್ಟಿನಿಂದ ಬಿಡುಗಡೆ ಹೊಂದಲು ಸಾಧ್ಯವಾಯಿತು. ನಿಷಿದ್ಧವೆಂದು ಹೆದರಿ ಅನುಕರಿಸಿದ ನಡವಳಿಕೆಯನ್ನು ನಿರ್ಭಯದಿಂದಲೂ ಉತ್ಸಾಹದಿಂದಲೂ ಅನುಕರಿಸಲು ಸಾಧ್ಯವಾಯಿತು. ಅಂದರೆ ಸಂಸ್ಕೃತಾನುಕರಣಕ್ಕೆ ಪೂರ ಬಂದಂತಾಯಿತು.

ಆದರೆ ಬದಲಾವಣೆಯು ಬರಿಯ ಸಂಸ್ಕೃತಾನುಕರಣದಲ್ಲಿ ಪರ್ಯಾವಸಾನ ಹೊಂದಿತು ಎಂದು ಹೇಳುವುದು ಅವೈಜ್ಞಾನಿಕವಾಗುತ್ತದೆ. ಯಾಕೆಂದರೆ, ಪಾಶ್ಚಾತ್ಯೀಕರಣವು ಬಹು ಸ್ಪಷ್ಟ ರೀತಿಯಲ್ಲಿ ಪಸರಿಸಹತ್ತಿತು. ನವೀನ ರಾಜ್ಯಾಡಳಿತಕ್ಕೆ ಒಳಗಾದವರು ಆಧುನಿಕ ಶಿಕ್ಷಣವನ್ನು ಪಡೆಯತೊಡಗಿದವರು, ಹೊಸ ಹೊಸ ವೃತ್ತಿಗಳನ್ನು ಸ್ವೀಕರಿಸಿದರು. ಬ್ರಿಟಿಶರ ಮತ್ತಿತರ ಪಾಶ್ಚಾತ್ಯರ ಜೀವನವು ಆದರ್ಶವೆಂದೂ, ಪರಂಪರೆಯ ತಮ್ಮ ಜೀವನವು ತುಚ್ಛವಾದುದೆಂದೂ ಕೆಲವರು ಅತ್ಯಂತ ಭಿನ್ನವಾದ ಜೀವನದಲ್ಲಿ ತೊಡಗಿದರು. ಹೀಗಾಗಿ ಪಾಶ್ಚಾತ್ಯರ ಆಹಾರ ಪಾನೀಯಗಳು, ಉಡಿಗೆ-ತೊಡಿಗೆಗಳು, ಮನೆ-ಮಂದಿರಗಳು, ಮಾತು-ಕತೆಗಳು, ಸಾಹಿತ್ಯ-ಕಲೆಗಳು, ತತ್ತ್ವ-ವಿಜ್ಞಾನಗಳು ಇತ್ಯಾದಿ ಆಕರ್ಷಕವಾದವು, ಜನರು ಇಂಗ್ಲಿಷಿನ ವ್ಯಾಮೋಹಕ್ಕೆ ಒಳಗಾದರು. ಮಾಂಸ, ಮದ್ಯ ಸೇವನೆಯು ಆಧುನಿಕ ಲಕ್ಷಣವೆಂದು ಬಗೆದರು; 'ಕ್ರಾಪುತಲೆಯೆ ಈ ನವೀನ ಯುಗದ ಜಗದ ಕೇತನ' ಎಂದು ತಿಳಿಸಿದರು; ಪ್ರೇಮ ವಿವಾಹಕ್ಕೆ ಮನ್ನಣೆ ನೀಡತೊಡಗಿದರು; ಸ್ತ್ರೀ ಸ್ವಾತಂತ್ರ್ಯಕ್ಕೆ ಪುರಸ್ಕಾರ ಕೊಡಹತ್ತಿದರು; ಪತ್ನಿಯನ್ನು ಗೆಳತಿಯಂತೆ ಕರೆದು ಕ್ಲಬ್ಬುಗಳಿಗೆ ಕರೆದೊಯ್ಯ ತೊಡಗಿದರು. ದೃಷ್ಟಿಯು ಧಾರ್ಮಿಕ ಮೌಢ್ಯದಿಂದ ವೈಜ್ಞಾನಿಕದೆಡೆಗೆ ಮಾರ್ಪಡುವಂತೆ ಯತ್ನಿಸಿದರು. ಅಂದರೆ ಇಂಥವೆಲ್ಲಾ ಪಾಶ್ಚಾತ್ಯರ ಪ್ರಭಾವದಿಂದಾದುವು.

ಇನ್ನು ಸಮಾಜಸೇವಾ ಕಾರ್ಯಗಳು ಸಾಮಾಜಿಕ ಬದಲಾವಣೆಗೆ ಹೇಗೆ ಕಾರಣವಾಗುತ್ತವೆ ಎಂಬುದನ್ನು ನೋಡೋಣ. ಜನರು ಪಡೆಯುವ ಎಲ್ಲ ಸೇವೆಗಳೂ ಸಮಾಜ ಸೇವೆಗಳೇ, ಒಂದು ದೃಷ್ಟಿಯಲ್ಲಿ. ಆರೋಗ್ಯ, ಉದ್ಯೋಗ, ಮನೆ, ಶಿಕ್ಷಣ ಹಾಗೂ ಮನೋರಂಜನೆಯ ವಲಯಗಳಲ್ಲಿ ಜನರಿಗೆ ವಿವಿಧ ಸೇವೆಗಳು ಬೇಕಾಗುತ್ತವೆ. ಆದರೆ ಕೆಲವು ಜನರಿಗೆ ಸಾಧಾರಣ ಸೇವೆಗಳ ಜೊತೆಗೆ ವಿಶೇಷ ಸೌಲಭ್ಯಗಳೂ ಬೇಕಾಗುತ್ತವೆ. ಬಡವರು, ಅಸ್ಪೃಶ್ಯರು, ಆದಿವಾಸಿಗಳು, ಮನೋವಿಕಲರು, ದೈಹಿಕ ರೋಗಿಗಳು, ಅವಿವಾಹಿತ ಮಾತೆಯರು, ತಬ್ಬಲಿಗಳು, ಮುದುಕರು, ಹಾದಿ ತಪ್ಪಿದ ಮಕ್ಕಳು ಮುಂತಾದವರಿಗೆ ಹೆಚ್ಚಿನ ಸೇವಾ ಕಾರ್ಯಗಳು ಬೇಕಾಗುತ್ತವೆ. ಇವೆಲ್ಲವನ್ನೂ ಸಮಾಜ ಕಲ್ಯಾಣ ಸೇವೆಗಳೆಂದು ಕರೆಯಬಹುದು. ಇಂಥ ಕಾರ್ಯಗಳು ಹಿಂದಿನಿಂದಲೂ ಕುಟುಂಬ, ಬಳಗ, ಜಾತಿ, ಗ್ರಾಮ ಮುಂತಾದ ಘಟಕಗಳಿಂದ ನೆರವೇರುತ್ತಿದ್ದವು. ಆದರೆ ಆಧುನಿಕ ಕಾಲದಲ್ಲಿ ಇವಕ್ಕೆ ಬೇರೆಯೇ ಆದ ಔಪಚಾರಿಕ ವ್ಯವಸ್ಥೆಗಳು ಬೇಕಾಗುತ್ತವೆ. ಇಂಥ ವ್ಯವಸ್ಥೆಗಳ ಆರಂಭ ಬ್ರಿಟಿಶರ ಕಾಲದಲ್ಲಿ ಆಯಿತು.

www.shikari.com

ಅಂದಿನ ಸರಕಾರವೂ ಕ್ರೈಸ್ತ ಮಿಶನರಿಗಳೂ ಸಮಾಜಸೇವಾ ಕಾರ್ಯಗಳನ್ನು ವ್ಯವಸ್ಥೆಗೊಳಿಸಿದರು. ಸರಕಾರವು ಆಡಳಿತಕ್ಕೆ ಅನುಕೂಲವಾಗಲೆಂದೂ, ಪಾಶ್ಚಾತ್ಯ ಸಂಸ್ಕೃತಿಯ ಪ್ರಚಾರಕ್ಕೆಂದೂ ಅನೇಕ ಸುಧಾರಣಾ ಕಾಯಿದೆಗಳನ್ನು ಜಾರಿಗೆ ತಂದರು. ಉದಾಹರಣೆಗೆ, ಸತೀ ಹೋಗುವ ಪದ್ಧತಿಯನ್ನು ಪ್ರತಿಬಂಧಿಸಿದುದು, ಬಾಲ್ಯ ವಿವಾಹಕ್ಕೆ ಆತಂಕ ತಂದುದು; ವಿಧವಾ ವಿವಾಹವನ್ನು ಪುರಸ್ಕರಿಸಿದುದು, ಕಾನೂನಿನ ದೃಷ್ಟಿಯಲ್ಲಿ ಎಲ್ಲರೊಂದೆಯೆಂಬುದನ್ನು ಸಾರಿದುದು-ಇವನ್ನು ನೆನೆಯಬಹುದು.

ಇದರಿಂದ ಇದುವರೆಗೂ ನಿರ್ಲಕ್ಷಿಸಲ್ಪಟ್ಟ ಜನರಿಗೆ ಹೊಸ ಚೇತನ ಬಂತು, ನವೀನದೃಷ್ಟಿ ದೊರಕಿತು, ಅವರ ಸಾಮಾಜಿಕ ಜೀವನದಲ್ಲಿ ಮಹತ್ತರವಾದ ಬದಲಾವಣೆಗಳಾದವು. ಹೀನಜಾತಿಯವರಿಗೂ ಉಚ್ಚ ಜಾತಿಯವರಿಗೂ ಇದ್ದ ಕಂದಕಕ್ಕೆ ಸೇತುವೆಯು ದೊರಕಿತು.

ಈ ಪ್ರಸಂಗದಲ್ಲಿ ಹಿಂದುಳಿದ ವರ್ಗಗಳ ಚಳುವಳಿಯ ಬಗ್ಗೆ ಪ್ರಸ್ತಾಪಿಸುವ ಅಗತ್ಯವಿದೆ. ದಕ್ಷಿಣ ಭಾರತವು ಉತ್ತರ ಭಾರತಕ್ಕಿಂತಲೂ ಹೆಚ್ಚು ಸಾಂಪ್ರದಾಯಕ ಸಮಾಜವನ್ನು ಹೊಂದಿತ್ತು. ಇಲ್ಲಿ ಈ ಶತಮಾನದ ಆದಿಯಲ್ಲಿ ಹಿಂದುಳಿದ ವರ್ಗಗಳ ಚಳುವಳಿಯು ಆರಂಭವಾಯಿತು. ಈ ಚಳುವಳಿಯ ಕೇಂದ್ರ ಮದ್ರಾಸ್. ಅಲ್ಲಿಂದ ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳಿಗೆ ಚಳುವಳಿಯು ಹಬ್ಬಿತು. ಹಿಂದುಳಿದ ವರ್ಗಗಳೆಂದರೆ ಬ್ರಾಹ್ಮಣರನ್ನು ಹೊರತಾದ ಎಲ್ಲಾ ಜಾತಿಯವರು ಎಂದು ಅರ್ಥ ಮಾಡಲಾಯಿತು. ಮುದಲಿಯಾರರು, ನಾಡಾರರು, ನಾಯಿಡರು, ರೆಡ್ಡಿಯರು, ಲಿಂಗಾಯಿತರು, ಒಕ್ಕಲಿಗರು ಮುಂತಾದವರೆಲ್ಲಾ ಆ ಗುಂಪಿಗೆ ಸೇರಿದರು, ಇದುವರೆಗೂ ಒಬ್ಬೊಬ್ಬರದು ಒಂದೊಂದು ಪ್ರಪಂಚವೇ ಆಗಿದ್ದ ಜಾತಿಗಳು ಈಗ ಒಂದು ಸಾಮಾನ್ಯ ಕಟ್ಟಿನೊಳಗೆ ಬಂದಂತಾಯಿತು. ಹೀಗೆಂದರೆ ಅವರೆಲ್ಲಾ ಒಂದೇ ಗುಂಪಾಗಿ ಮಾರ್ಪಟ್ಟರೆಂದು ಅರ್ಥವಲ್ಲ. ಅವರೆಲ್ಲರೂ ಒಂದಾದುದು ಕೆಲವು ಉದ್ದೇಶಗಳಿಗಾಗಿ : ಬ್ರಾಹ್ಮಣರಂತೆ ತಾವೂ ವಿದ್ಯಾವಂತರಾಗುವುದು, ಅವರಂತೆ ತಾವೂ ಸರಕಾರಿ ನೌಕರರಾಗುವುದು, ರಾಜ್ಯಭಾರದಲ್ಲಿ ಪಾಲುಗೊಳ್ಳುವುದು ಇವು ಮುಖ್ಯ ಉದ್ದೇಶಗಳು. ಈ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಸರಕಾರವು ವಿವಿಧ ಸೌಲಭ್ಯಗಳನ್ನು ಕಲ್ಪಿಸಬೇಕೆಂದು ಚಳುವಳಿಕಾರರು ಒತ್ತಾಯಪಡಿಸಿದರು.

*ಪ್ರಶ್ನೆಗಳು :*

(ಅ) 'ಸಂಸ್ಕೃತಾನುಕರಣ' ಎಂದರೇನು ?

(ಆ) ಬ್ರಿಟಿಷರು ಕೈಗೊಂಡ ಸಮಾಜಸೇವಾ ಕಾರ್ಯಗಳ ವೈಖರಿ ಹೇಗಿತ್ತು ?

(ಇ) ಸಂಸ್ಕೃತಾನುಕರಣ ಬೆಳೆದುಬಂದ ಬಗೆ ಹೇಗೆ ?

(ಈ) 'ಕ್ರಾಪುತಲೆಯೆ ಈ ನವೀನಯುಗದ ಜಗದ ಕೇತನ' ಈ ಮಾತು ಸಮಾಜದ ವೈಜ್ಞಾನಿಕ ಮಾರ್ಪಾಟಿಗೆ ಹೇಗೆ ಅರ್ಥನೀಡುತ್ತದೆ ?

(ಉ) ಹಿಂದುಳಿದ ವರ್ಗಗಳ ಚಳುವಳಿಯ ಮುಖ್ಯ ಉದ್ದೇಶಗಳೇನಾಗಿತ್ತು ?

www.shikshat.com

**3.** ಈ ಕೆಳಗಿನ ಗದ್ಯಭಾಗದ ಸಾರವನ್ನು ನಿಮ್ಮ ಸ್ವಂತ ಮಾತುಗಳಲ್ಲಿ 100 ಶಬ್ದಗಳಿಗೆ ಮೀರದಂತೆ ಸಂಗ್ರಹಿಸಿ ಬರೆಯಿರಿ. ಲೇಖನದ ಕೊನೆಯಲ್ಲಿ ನೀವು ಬಳಸಿರುವ ಶಬ್ದಗಳ ಸಂಖ್ಯೆಯನ್ನು ಸೂಚಿಸಿ. *25*

ವಿ.ಸೂ. : *ಲೇಖನ ಸಂಗ್ರಹವು ಸೂಚಿಸಿರುವುದಕ್ಕಿಂತ ಹೆಚ್ಚು ಅಥವಾ ಕಡಿಮೆ ಇದ್ದರೆ ಅಂಕಗಳನ್ನು ಕಳೆಯಲಾಗುವುದು.*

ಕನ್ನಡ ಒಂದು ಭಾಷೆ; ಇಂಥ ಭಾಷೆಗಳು ನಮ್ಮ ದೇಶದಲ್ಲಿ ಹಲವು ಇವೆ. ಆದರೆ ಇದು ನಮ್ಮ ಭಾಷೆ. ಅದರಲ್ಲಿ ನಮಗೆ ಪ್ರೀತಿ ಇರುವುದು ಸಹಜ. ಅಭಿಮಾನವೂ ಅಗತ್ಯ. ಅಭಿಮಾನವೆಂದರೆ ವಿನಯರಹಿತವಾದ ಅಹಂಕಾರವಲ್ಲ; ಇದು ನಮ್ಮದು, ನಮ್ಮ ಮನಸ್ಸಿನ ಕೆಲಸಕ್ಕೆ ಇರುವ ಒಂದೇ ಒಂದಾದ ಸಾಧನ; ಇದನ್ನು ನಾವು ಸರಿಯಾಗಿ ಉಪಯೋಗಿಸುತ್ತೇವೆ; ಇದರಲ್ಲಿ ನಮ್ಮ ಬದುಕಿನ ಅತ್ಯುತ್ತಮ ಅಂಶಗಳನ್ನು ರೂಪುಗೊಳಿಸುತ್ತೇವೆ; ಇದರಲ್ಲಿ ಆಗಲೇ ಇರುವ ಅತ್ಯುತ್ತಮ ಅಂಶಗಳಿಂದ ನಾವೂ ರೂಪುಗೊಳ್ಳುತ್ತೇವೆ; ಇದನ್ನು ಮನೋವ್ಯಾಪಾರಗಳ ಅತಿಸೂಕ್ಷ್ಮ ಉಪಕರಣವನ್ನಾಗಿ ಮಾಡಿ ನಮ್ಮ ಮಕ್ಕಳಿಗೆ ದತ್ತಿಯಾಗಿ ಬಿಡುತ್ತೇವೆ ಎಂಬ ಉತ್ಸಾಹ, ಸಂಕಲ್ಪ, ಆ ಸಂಕಲ್ಪಕ್ಕನುಸಾರವಾಗಿ ನಮ್ಮ ಈ ಭಾಷೆಯಲ್ಲಿ ಈವರೆಗೆ ನಡೆದಿರುವ ಕೆಲಸವನ್ನು ಅಭ್ಯಾಸ ಮಾಡಿ, ಪರೀಕ್ಷಿಸಿ, ಆದರ ಕುಂದು ಕೊರತೆಗಳೇನು, ಅದರ ಬೆಳವಣಿಗೆ ಇನ್ನು ಯಾವ ದಿಕ್ಕಿನಲ್ಲಿ ನಡೆಯಬೇಕೆಂದು ನಿರ್ಧರಿಸುತ್ತೇವೆ; ಆ ನಿರ್ಧಾರಕ್ಕನುಸಾರವಾಗಿ ಹೆಚ್ಚು ಗಲಾಟೆ, ಗೊಂದಲ, ಕೂಗಾಟ, ಉದ್ರೇಕ ಇಲ್ಲದೆ ಒಂಟಿಯಾಗಿ ಕುಳಿತು ಸಂಸ್ಕೃತದಲ್ಲಿ, ಇಂಗ್ಲಿಷಿನಲ್ಲಿ ಏನೇನು ಜ್ಞಾನನಿಧಿಯಿದೆಯೋ ಅದನ್ನು ನಮ್ಮದಾಗಿ ಮಾಡಿಕೊಳ್ಳುವಂತೆ ನಿರಂತರವಾದ, ಕೂಲಂಕಷ ವ್ಯಾಸಂಗ ನಡೆಸುತ್ತೇವೆ; ಚಿಂತಿಸುತ್ತೇವೆ; ನಮ್ಮ ಅಂತರಂಗ ಜೀವನದ ಸ್ಫುರಣೆಯಿಂದ ಆಗ ಕಂಡುಕೊಳ್ಳುವ ಹೊಸ ಸಂಗತಿಗಳನ್ನು, ವಿಚಾರಗಳನ್ನು, ಅನುಭವಗಳನ್ನು ಕನ್ನಡದಲ್ಲಿ ರೂಪುಗೊಳಿಸಲು ಒಂಟಿಯಾಗಿ ಕುಳಿತು ಯಾವ ಬಹುಮಾನದ, ಲಾಭದ, ಪ್ರಶಂಸೆಯ ಆಶೆಯೂ ಇಲ್ಲದೆ ಕೆಲಸ ಮಾಡುತ್ತೇವೆ - ಎಂದುಕೊಳ್ಳುವ ಈ ವಿನಯಪೂರ್ವಕವಾದ ಅಭಿಮಾನ ದೃಷ್ಟಿಯೇ ಕನ್ನಡದ ಪುರೋಭಿವೃದ್ಧಿಗೆ ಸಹಾಯಕವಾಗಬಲ್ಲ ಒಂದೇ ಒಂದು ದೃಷ್ಟಿ.

ಅಂಥ ದೃಷ್ಟಿಯಿಂದ ಕೆಲಸ ಮಾಡವಾಗ ಮರೆಯಬಾರದ ಮಾತೆಂದರೆ ಭಾಷೆ ಎಂಬುದು ಜಾತಿ, ಮತ, ಕುಲ, ಗೋತ್ರ ಯಾವುದೂ ಇಲ್ಲದ ನಿರ್ಮಲ ಮನಸ್ಸಿನ ಕೆಲಸ ಎಂಬ ಮೂಲ ಸಂಗತಿ. ನಮ್ಮ ಮನಸ್ಸಿನಲ್ಲಿ ಹುಟ್ಟುವ ಭಾವನೆಗಳಿಗೆ, ಅಲ್ಲಿ ಸ್ಫುರಿಸುವ ಹೊಸ ವಿಚಾರಗಳಿಗೆ, ಅಲ್ಲಿ ಘನಿಸುವ ಅನುಭವಗಳಿಗೆ, ಅದು ಕಂಡು ಕೊಳ್ಳುವ ಹೊಸ ಸಂಶೋಧನೆಗಳಿಗೆ ಒಂದು ರೂಪು ಕೊಡಲು ಅದನ್ನು ಮಾತಾಗಿ ಪರಿವರ್ತಿಸಲು ಇರುವ ಸಾಧನ ಭಾಷೆ. ಒಬ್ಬ ವ್ಯಕ್ತಿ ತನ್ನ ಏಕಾಂಗಿತನದಲ್ಲಿ ಬಳಸಬೇಕಾದ,

[Turn over

www.sakshat.com

ಆದರೆ ತಲತಲಾಂತರಗಳಿಂದ ಅನೇಕ ವ್ಯಕ್ತಿಗಳು ಬಳಸಿ ಶ್ರೀಮಂತವಾಗಿ ಮಾಡಿದ ಸಾಧನ ಅದು. ಆದಕಾರಣ ಅದು ವೈಯಕ್ತಿಕವೂ ಹೌದು ಸಾಮಾಜಿಕವೂ ಹೌದು ಏಕಕಾಲಕ್ಕೆ. ಎಂದರೆ, ಅದರ ಬಳಕೆಯಲ್ಲಿ ವ್ಯಕ್ತಿಯ ಬದುಕಿನ ಸಾರವೇ ಇರುವುದಾದರೂ ಪರಿಣಾಮ ರೂಪದಲ್ಲಿ ಅದು ಸಾಮಾಜಿಕವೂ ಹೌದು. ಅದರಿಂದ ಭಾಷೆಯ ಬೆಳವಣಿಗೆಯ ಮೂಲಕ ವ್ಯಕ್ತಿವಿಕಾಸ ಹೇಗೋ ಹಾಗೆ ಸಮಾಜದ ವಿಕಾಸವೂ ಸಾಧ್ಯವಾಗಬೇಕು. ಯಾವಾಗ ಭಾಷೆಯ ಉಪಯೋಗ ಹೀಗೆ ಆಗುತ್ತದೋ ಆಗಲೇ ಅದರ ಸಂಪೂರ್ಣ ಪ್ರಯೋಜನ ನಮಗೆ ದೊರೆಯುತ್ತದೆ. ಅದು ಸಾಮಾಜಿಕವಾಗುವ ವ್ಯಕ್ತಿಕ್ರಿಯೆಯೇ ಹೊರತು ಹತ್ತು ಜನ ಸೇರಿ ಮಾಡುವ ಕೆಲಸವಲ್ಲ ಎಂಬುದು ನೆನಪಿಡಬೇಕಾದ ಸಂಗತಿ.

ಭಾಷೆಯಲ್ಲಿ ನಡೆಯುವ ಅನೇಕ ವಿಧದ ಅಭಿವ್ಯಕ್ತಿಗಳಲ್ಲಿ ಸಾಹಿತ್ಯವೂ ಒಂದು. ವೈಯಕ್ತಿಕವಾದದ್ದು ಸಾರ್ವತ್ರಿಕವಾಗಬೇಕೆಂಬ ಪ್ರಯತ್ನವೇ ಈ ಎಲ್ಲ ಅಭಿವ್ಯಕ್ತಿಗಳ ಹಿಂದಿರುವ ಉದ್ದೇಶ. ಈ ಪ್ರಯತ್ನ ಸಾಹಿತ್ಯದಲ್ಲಿ ನಡೆದಷ್ಟು ನಿಷ್ಠೆಯಿಂದಲೂ ಸಮಗ್ರವಾಗಿಯೂ ಇನ್ನು ಯಾವ ಅಭಿವ್ಯಕ್ತಿವಿಧಾನದಲ್ಲೂ ನಡೆಯುವುದಿಲ್ಲ. ಸಾಮಾನ್ಯವಾಗಿ ಮನಸ್ಸಿನಲ್ಲಿರುವ ವಿಚಾರವನ್ನೋ ಭಾವನೆಯನ್ನೋ ಓದಿ ತಿಳಿದ ಸಂಗತಿಗಳನ್ನೋ ಹೊರಕ್ಕೆ ಹಾಕುವುದಷ್ಟೇ ನಮ್ಮ ಉದ್ದೇಶವಾಗಿರುತ್ತದೆ. ಆಗ ಭಾಷೆ ಕೇವಲ ಮಾಧ್ಯಮವಾಗುತ್ತದೆ, ಕೇವಲ ವಾಹಕವಾಗುತ್ತದೆ. ಆದರೆ ಕೆಲವು ಸಲ ನಮಗೆಲ್ಲರಿಗೂ ಅಷ್ಟರಿಂದ ತೃಪ್ತಿ ಆಗುವುದಿಲ್ಲ. ನಮ್ಮ ಇಂಗಿತ; ನಮ್ಮ ಅನುಭವದ ಸಮಗ್ರ ರೂಪ ಭಾಷೆಯಲ್ಲಿ ಮೈ ತಳೆಯಬೇಕು. ಈಗ ಜೀವಿಸುವ ಜನ ಮಾತ್ರವಲ್ಲ, ಮುಂದಿನ ಜನಾಂಗಗಳೂ ಕೂಡಾ ಈ ಜೀವನಾನುಭವಗಳ ಮೂಲರೂಪವನ್ನು ಅರಿತು ಪುನರನುಭವಿಸಿ, ಸಂತೋಷಪಡಲು, ಪ್ರಚೋದನೆಗೊಳ್ಳಲೂ ಸಾಧ್ಯವಾಗಬೇಕು ಎನ್ನಿಸುತ್ತದೆ. ಈ ಉದ್ದೇಶದಿಂದ ಸಾಹಿತ್ಯ ರಚನೆ ನಡೆಯುತ್ತದೆ. ಆದಕಾರಣ ಇದು ಕೇವಲ ಸಾಹಿತಿಗಳು ಎನ್ನಿಸಿಕೊಂಡವರಿಗೇ ಸಾಧ್ಯವಾದ ಕೆಲಸ ಅಂತ ತಿಳಿಯಬೇಕಾಗಿಲ್ಲ. ಮಾತಾಡಲು ಬಲ್ಲವಲೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ. ಒಂದಲ್ಲ ಒಂದು ಸಲ, ಒಂದಲ್ಲ ಒಂದು ಮಟ್ಟದಲ್ಲಿ ಬಹುಶಃ ತಮಗೆ ಗೊತ್ತಿಲ್ಲದೇ ಈ ಕೆಲಸವನ್ನು ಆಗಾಗ ಮಾಡುತ್ತಲೇ ಇರುತ್ತಾರೆ. ಆದರೆ ಈ ಕೆಲಸ ಅತ್ಯಂತ ಸಫಲವಾಗಿ ನಡೆಯುವುದು ತನ್ನ ಮನಸ್ಸನ್ನು ಉತ್ತು ಹದಗೊಳಿಸಿಕೊಂಡು ನೀರು ಹರಿಸಿ ಕಳೆಗಳನ್ನು ಕಿತ್ತು ಕಾಯಬಲ್ಲ. ತನ್ನ ಪ್ರತ್ಯೇಕತೆಯ ತೀವ್ರವಾದ ಅರಿವು ಉಳ್ಳವನಿಂದ; ಅದಕ್ಕಿಂತ ಹೆಚ್ಚಾಗಿ ವೀಣೆಯನ್ನೋ ಪಿಟೀಲನ್ನೋ ರಾಕ್ಷಸಸಾಧನೆಯಿಂದ ತನಗೆ ಸಂಪೂರ್ಣ ವಶವರ್ತಿಯಾಗುವಂತೆ ಮಾಡಿಕೊಂಡು ತನ್ನ ಅನುಭವಕ್ಕೆ ನಾದರೂಪ ಕೊಡುವ ಸಂಗೀತಗಾರನಂತೆ. ಆದಕ್ಕೆ ಶಿಲಾ ರೂಪ ಕೊಡುವ ಶಿಲ್ಪಿಯಂತೆ ಯಾರು ಭಾಷೆಯ ಬೇರು ಬೇರನ್ನೂ ಹಿಡಿದು ಅಲ್ಲಾಡಿಸಿ ಶಬ್ದ ಶಬ್ದಗಳನ್ನು ಹಿಡಿದು ಬಡಿದು ಒರೆಗೆ ಹಚ್ಚಿ ನೋಡಿ

www.shikaa.com

ಮಾತು ಸೂಚಿಸುವ ಅರ್ಥದಲ್ಲಿ ತನ್ನಂತರಂಗ ಕ್ರಿಯೆಗೆ ತಕ್ಕ ಪ್ರತಿಮೆಯನ್ನು ಸೃಷ್ಟಿಸಲು ಹೆಣಗುತ್ತಾನೋ ಅಂಥವನಿಂದ, ಅಂತರಂಗದ ತೀವ್ರವಾದ ಕೆಲಸದಿಂದ ಹುಟ್ಟುವ ಸಾಹಿತ್ಯದಲ್ಲಿ ಭಾಷೆ ತನ್ನ ಅತ್ಯುತ್ತಮ ಕ್ರಿಯೆಯನ್ನು ಕಾಣುತ್ತದೆ. ಆದಕಾರಣವೇ ಕನ್ನಡದ ಅಭಿಮಾನಿಯೆನ್ನಿಸಿಕೊಳ್ಳುವವನು ಭಾಷೆಯ ಶ್ರೇಷ್ಠ ಆವಿಷ್ಕಾರದ ಬಗ್ಗೆ ಆಸಕ್ತನಲ್ಲವಾದರೆ ಅದರ ಆ ಅಭಿಮಾನವನ್ನೇ ನಾವು ಶಂಕಿಸಬೇಕಾಗುತ್ತದೆ.

ಕನ್ನಡದ ಬಗ್ಗೆ ಅಭಿಮಾನದ ಮಾತುಗಳು ಇಷ್ಟು ಕೇಳಿಬರುತ್ತಿರುವ ಈ ಕಾಲದಲ್ಲೂ ನಮ್ಮ ಶಿಕ್ಷಣ ಪದ್ಧತಿಯಲ್ಲಿ ಕನ್ನಡ ಸಾಹಿತ್ಯಾಭ್ಯಾಸ ಒಂದು ಶಿಕ್ಷಾಕ್ರಮ ಅಥವಾ ಡಿಸಿಪ್ಲಿನ್ ಆಗಿ ಇನ್ನೂ ರೂಪುಗೊಳ್ಳದಿರುವುದು ಅತ್ಯಂತ ವಿಷಾದದ ಸಂಗತಿ. ಸಾಹಿತ್ಯದ ಅಧ್ಯಯನವೇ ಒಂದು ಶಿಕ್ಷಾಕ್ರಮವಾಗಬೇಕಾದರೆ ಅದರ ಅಭ್ಯಾಸದಿಂದ ನಮ್ಮ ಮನಸ್ಸು ಸಂಪೂರ್ಣ ಸಂಸ್ಕಾರಗೊಳ್ಳುವ ಹಾಗೆ ಆಗಬೇಕು. ಒಂದು ಕೃತಿಯನ್ನು ಓದಿ ಅದಕ್ಕೆ ಸಂಬಂಧಪಡದ, ಅದರ ಅಧ್ಯಯನದಿಂದ ಹುಟ್ಟಿದ ವಾಗ್ಜಾಲವನ್ನೂ, ವಿಶೇಷಣ ಸಹಸ್ರಗಳನ್ನೂ ಬಳಸಿ ಹಳತಾದ ಯಾವ ಕೃತಿಗಾದರೂ ಅನ್ವಯಿಸಬಹುದಾದಂಥ ಸರ್ವಸಾಧಾರಣವಾದ ಅಭಿಪ್ರಾಯಗಳನ್ನೂ ಪೋಣಿಸಿ ಉತ್ತರ ಬರೆದು ಪದವಿಗಳನ್ನು ಪಡೆದು ಹೋಗುವ ನಮ್ಮ ವಿದ್ಯಾರ್ಥಿಗಳನ್ನು ಕಂಡರೆ ಅವರ ಬಗ್ಗೆಯೂ ಕನ್ನಡ ಬಗ್ಗೆಯೂ ಯಾರಿಗೇ ಆಗಲಿ ಕನಿಕರ ಹುಟ್ಟದೆ ಇರಲಾರದು. ಅಂಥವರ ಮುಂದೆ ಒಂದು ಹೊಸ ಸಣ್ಣ ಕಥೆಯನ್ನೋ ಕವನವನ್ನೋ ಇಟ್ಟಾಗ ಅದರ ಬಗ್ಗೆ ಗ್ರಾಹ್ಯವಾಗಬಲ್ಲ ಚಕಾರವನ್ನಾದರೂ ನುಡಿಯಲಾರದ ಅವರ ಈ ಸ್ಥಿತಿಗೆ ನಮ್ಮ ಇಂದಿನ ಕನ್ನಡ ಸಾಹಿತ್ಯದ ಅಧ್ಯಯನ ರೀತಿಯೇ ಕಾರಣ ಎನ್ನಬೇಕು. ನಿಜವಾದ ಕನ್ನಡದ ಅಭಿಮಾನವಿದ್ದರೆ ಈ ಬಗ್ಗೆ ಅಧಿಕಾರಸ್ಥರು ಯೋಚಿಸದೆ ಇರಲು, ಕಾತುರರಾಗದೆ ಇರಲು, ಪ್ರಯೋಗ ನಡೆಸದೆ ಇರಲು ಏನು ಕಾರಣ ?

ಶಿಕ್ಷಣದಿಂದ ಸಿದ್ಧಿಸಬೇಕಾದ ವ್ಯಕ್ತಿತ್ವದ ಬಗ್ಗೆ ಸರಿಯಾದ ಚಿಂತನೆ ಇಲ್ಲದಿರುವುದೇ ಬಹುಶಃ ಸಾಹಿತ್ಯಾಭ್ಯಾಸದ ಬಗ್ಗೆ ಈಗ ಇರುವ ನಿರ್ಲಕ್ಷ್ಯಕ್ಕೆ ಕಾರಣವಾಗಿರಬಹುದು. ಯಾವೊಂದು ಶಿಕ್ಷಾಕ್ರಮವಾಗಲಿ ಅದರ ಮೂಲಕ ಮನಸ್ಸಿನ ಎಲ್ಲ ಅಂಶಗಳಿಗೂ ತಕ್ಕ ತರಬೇತಿ ಸಿಕ್ಕಿ ಅವು ಆರೋಗ್ಯಕರವಾಗಿ ಬೆಳೆದು ಒಂದರೊಡನೊಂದು ಸಾಂಗತ್ಯವನ್ನು ಹೊಂದಿ ಇಡೀ ಮನಸ್ಸೇ ಶ್ರುತಿ ಹಿಡಿದ ವಾದ್ಯಮೇಳದಂತಾಗಬೇಕು.

www.shikurat.com

[Turn over

**4.** ಕೆಳಗಿನ ಗದ್ಯಭಾಗವನ್ನು ಕನ್ನಡಕ್ಕೆ ಭಾಷಾಂತರಿಸಿ : 25

Children are innocent, loving and benevolent by nature. Evil comes in only when they become older. They are innocent even in their mischief. If this holds good in your case, each of you should serve others, helping them to rise higher and saving them from a fall. You should watch and if necessary warn one another. Your watch should not be like that of a policeman but of God. God watches us all not with a view to punish but to chasten. Such should be the nature of your watch also. You must teach others what they do not know. Whoever speaks an untruth should be lovingly turned away from it. Remember, you must keep the promise you have made.

www.shikarat.com

## ಭಾಗ ಬಿ

5. ಕೆಳಗಿನವುಗಳಲ್ಲಿ ಒಂದನ್ನು ಕುರಿತು 100 ಪದಗಳಲ್ಲಿ ಪತ್ರಿಕಾ ಸಂಪಾದಕರಿಗೆ ಒಂದು ಪತ್ರ ಬರೆಯಿರಿ : 10

(a) ಶಬ್ದ ಮಾಲಿನ್ಯವನ್ನು ತಡೆಗಟ್ಟುವ ಬಗೆ

(b) ಶಾಂತಿ ಕದಡುತ್ತಿರುವ ಮಾದಕ ವಸ್ತುಗಳ ಹಾವಳಿ

(c) ದುರುಪಯೋಗಕ್ಕೆ ಬಳಸಲಾಗುತ್ತಿರುವ 'ಮೊಬೈಲ್'

6. ಕೆಳಗಿನವುಗಳಲ್ಲಿ ಎರಡರ ಅರ್ಥಸ್ವಾರಸ್ಯವನ್ನು ವಿವರಿಸಿ : 10

(a) ಹಾಸಿಗೆ ಇದ್ದಷ್ಟು ಕಾಲುಚಾಚು

(b) ಹನಿಹನಿ ಕೂಡಿದರೆ ಹಳ್ಳ

(c) ಲಂಚಕೊಟ್ಟು ಮಂಚ ಏರು

(d) ರೊಟ್ಟಿ ಜಾರಿ ತುಪ್ಪಕ್ಕೆ ಬಿತ್ತು

7. ಕೆಳಗಿನ ನುಡಿಗಟ್ಟುಗಳಲ್ಲಿ ಎರಡರ ಅರ್ಥವನ್ನು ವಿವರಿಸಿ, ಅವುಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಪ್ರಯೋಗಿಸಿ : 5

(a) ಮಣ್ಣು ಮುಕ್ಕು

(b) ಕಬ್ಬಿಣದ ಕಡಲೆ

(c) ಗಾಳಿಗೋಪುರ

(d) ತೂರಿಬಿಡು

(e) ನೀರಿನಮೇಲಣಗುಳ್ಳೆ

8. ಕೆಳಗಿನ ಪ್ರಶ್ನೆಗಳಿಗೆ ಸೂಕ್ತ ಉತ್ತರ ಬರೆಯಿರಿ : 5

(a) 'ಚಿರಂತನ ದಾಹ' – ಯಾರು ಬರೆದ ಕಾವ್ಯ ?

(b) ಜ್ಞಾನಪೀಠ ಪ್ರಶಸ್ತಿಯನು ಸ್ಥಾಪಿಸಿದವರ ಹೆಸರೇನು ?

(c) 'ಪುತಿನ' – ಎಂಬ ಕಾವ್ಯನಾಮದ, ಕವಿಯಪೂರ್ಣ ಹೆಸರೇನು ?

(d) ಬನವಾಸಿಯಲ್ಲಿ ಕೋಗಿಲೆಯಾಗಿ ಹುಟ್ಟಲು ಬಯಸಿದ ಪ್ರಾಚೀನ ಕವಿಯಾರು ?

(e) ಕನ್ನಡದ ವರ್ಗೀಯ ವ್ಯಂಜನಗಳ ಸಂಖ್ಯೆ ಎಷ್ಟು ?

www.shikarat.com

## ಭಾಗ ಸಿ

9. ಈ ಕೆಳಗಿನವುಗಳಲ್ಲಿ ಐದಕ್ಕೆ ತತ್ಸಮ ರೂಪಗಳನ್ನು ಕೊಡಿ : 5

(a) ದನಿ

(b) ಬಿಜ್ಞೆ

(c) ಸಂಜೆ

(d) ದೀವಿಗೆ

(e) ರತುನ

(f) ರಿಸಿ

(g) ಸೊನ್ನೆ

(h) ಕಬ್ಬ

(i) ದಾಡೆ

(j) ಮಿಳ್ತು

10. ಕೆಳಗಿನವುಗಳಲ್ಲಿ ಐದಕ್ಕೆ ತದ್ಭವ ರೂಪಗಳನ್ನು ನೀಡಿ : 5

(a) ಕೂಷ್ಮಾಂಡ

(b) ಲಕ್ಷ್ಮೀ

(c) ಸ್ಥಾನ

(d) ಭಕ್ತಿ

(e) ಮೃಗ

(f) ಕಾರ್ಯ

(g) ಅಡವಿ

(h) ವಿಷಯ

(i) ಯಾತ್ರೆ

(j) ತ್ಯಾಗ

www.shikarat.com

**11.** ಈ ಕೆಳಗಿನವುಗಳಲ್ಲಿ ಐದಕ್ಕೆ ವಿರುದ್ಧಾರ್ಥಕ ಶಬ್ದ ತಿಳಿಸಿ : *5*

(a) ಮರ್ಯಾದೆ

(b) ಆದಿ

(c) ಅಧರ್ಮ

(d) ಸದ್ಗುಣ

(e) ಸ್ವಕೀಯ

(f) ಆಸ್ತಿಕ

(g) ಕನಿಷ್ಠ

(h) ತಿರಸ್ಕರಿಸು

(i) ಹಿಂಗಾರು

(j) ಸಂದೇಹ

**12.** ಈ ಕೆಳಗಿನ ವಾಕ್ಯಗಳಲ್ಲಿ ಕಂಡುಬರುವ ಕಾಗುಣಿತಾಕ್ಷರಗಳ ತಪ್ಪುಗಳನ್ನು ತಿದ್ದಿಬರೆಯರಿ : *5*

(a) ಆಕಾಸದಲ್ಲಿ ನಕ್ಷತ್ರಗಳು ಮಿನುಗುತ್ತವೆ

(b) ಇದು ಅಪರುಪದ ಶೀಲಾಸ್ಮಾರಕ

(c) ಬರಪರಿಹರಹಣಕ್ಕಾಗಿ ಬರೆದ ಅರ್ಜಿಧಾರನ ಪತ್ರವಿದು

(d) ಇನ್ನಷ್ಟು ಸಂಶೋಧನೆಯಿಂದ ಬೂವೈಗ್ನಾನಿಕ ಮಹಾತಗಳು ಹೊರಬೀಳಬಹುದು

(e) ರೇತರು ಬೆಳೆಯ ಲಾಭವನ್ನು ಸಾಮನ್ಯವಾಗಿ ಅನ್ಯ ಉದ್ದೇಶಕ್ಕೆ ಬಳಸಿಕೊಳ್ಳುತ್ತಾರೆ

www.shikarat.com

**AA**

# 2011

## KANNADA

## (Compulsory)

*Time : 3 Hours ]* *[ Maximum Marks : 150*

---

### INSTRUCTIONS

*(1) Candidates should attempt **all** parts and **all** questions.*

*(2) The number of marks carried by each question is indicated with the question.*

*(3) Answers must be written in Kannada, unless otherwise directed.*

*(4) In the case of Q. No. 3 of Part A, marks will be deducted, if the **precis** is much longer or shorter than the prescribed length.*

*(5) Q. No. 3 of Part A should be answered in the **Precis Sheet** provided.*

*(6) Please do **not** affix your signatures or reveal your identity while answering the questions on letter writing.*

www.shikarat.com

---

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ಭಾಷಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಮೊದಲನೆಯ ಪುಟದಲ್ಲಿ ಮುದ್ರಿಸಲಾಗಿದೆ.